ಈ ದಿನ ದಿನಾಂಕಃ 26-09-2025 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ 1 ಮತ್ತು 3 ನೇ ಪ್ರತಿವಾದಿ ಪರ ಶ್ರೀ ಎಂ ಟಿ ಎಸ್ ವಕೀಲರಿಂದಃ**

ಸರ್ವೆ ನಂ 13/12ರಲ್ಲಿನ 1 ಎಕರೆ ಆಸ್ತಿ ನನಗೆ ವಿಭಾಗದ ಮೂಲಕ 2022-23 ನೇ ಸಾಲಿನಲ್ಲಿ ಬಂದಿರುತ್ತದೆ. ನಾನು ಮೆಸ್ಕಾಂ ನಲ್ಲಿ ಮೆಕ್ಯಾನಿಕ್ ಆಗಿ ಕೆಲಸ ಮಾಡಿರುತ್ತೇನೆ. ಸದರಿ ವಿಭಾಗಕ್ಕೂ ಮುನ್ನ ನಮ್ಮ ಕುಟುಂಬದಲ್ಲಿ ವ್ಯವಸಾಯವನ್ನು ನಮ್ಮ ಅಣ್ಣಂದಿರು ಮಾಡುತ್ತಿದ್ದರು. 2022-23 ನೇ ಸಾಲಿನಿಂದ ಸದರಿ ಜಮೀನಿನ ಸದರಿ ಸಾಗುವಳಿಯನ್ನು ನಾನು ಮುಂದುವರೆಸಿರುತ್ತೇನೆ. ಸರ್ವೆ ನಂ 13/2ರಲ್ಲಿ 1 ಎಕರೆ ಜಮೀನು ನಾನು ಸಾಗು ಮಾಡುತ್ತಿರುವ ಕುರಿತು ನ್ಯಾಯಾಲಯಕ್ಕೆ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ. ಸದರಿ ಆಸ್ತಿಯ ಚೆಕ್ಕುಬಂದಿ ಪೂರ್ವಕ್ಕೆ ಸೀಮಾರವರ ಜಮೀನು, ಪಶ್ಚಿಮಕ್ಕೆ ರುದ್ರೇಶ್ ರವರ ಜಮೀನು, ಉತ್ತರಕ್ಕೆ ರಂಗಪ್ಪನವರ ಜಮೀನು ಮತ್ತು ದಕ್ಷಿಣಕ್ಕೆ ಸಿದ್ದಪ್ಪನವರ ಜಮೀನು ಇದೆ. ಸದರಿ 1 ಎಕರೆ ಜಮೀನಿನಲ್ಲಿ ಯಾವುದೇ ಖರಾಬು ಜಮೀನು ಇರುವುದಿಲ್ಲ.

ವಾದಿ ಈ ದಾವೆಯನ್ನು ಸರ್ವೆ ನಂ 9ರ ಹಕ್ಕು ಮತ್ತು ಅನುಭವದಲ್ಲಿರುತ್ತೇವೆ ಎಂದು ಹೂಡಿರುತ್ತಾರೆ, ಸದರಿ ಸರ್ವೆ ನಂಬರಿನ ದಾಖಲೆಗಳನ್ನು ನಾನು ನೋಡಿಲ್ಲ. ಸದರಿ ಸರ್ವೆ ನಂ 9 ರಲ್ಲಿ ಎಷ್ಟು ಪೋಡುಗಳಾಗಿವೆ ಮತ್ತು ಎಷ್ಟು ವಿಸ್ತೀರ್ಣವಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಪ್ರ.ಪತ್ರಕ್ಕೆ ನಾನೇ ಮಾಹಿತಿಯನ್ನು ಕೊಟ್ಟಿರುತ್ತೇನೆ. ಸರ್ವೆ ನಂ 5,7,8,9,12 ಮತ್ತು 13 ಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ಹಾಗಾಗಿ ಸದರಿ ಸರ್ವೆ ನಂಬರುಗಳಲ್ಲಿ ಖರಾಬು ಜಮೀನು ಇರುವ ಕುರಿತು ನಾನು ದಾಖಲೆಗಳನ್ನು ನೋಡಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಖರಾಬು ಜಮೀನು ಇರುವ ಕುರಿತು ನಾನು ಕೇಳಲ್ಪಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಸರ್ವೆ ನಂ 9 ರಲ್ಲಿ 1 ಮತ್ತು 2 ನೇ ಪ್ರತಿವಾದಿಗಳು ಅನುಭವದಲ್ಲಿದ್ದಾರೆ ಎಂದು ನನ್ನ ಪ್ರಮಾಣಪತ್ರದಲ್ಲಿ ನಮೂದಿಸಿದ್ದು,

OS.No. 169/2018
PW-3

ಸದರಿ ಸರ್ವೆ ನಂಬರಿನ ದಾಖಲೆಗಳನ್ನು ನಾನು ನೋಡಿಲ್ಲ ಎಂದರೆ ಸರಿ. ಹಾಗಾಗಿ ಸದರಿ ಸರ್ವೆ ನಂಬರಿನಲ್ಲಿ ದಾರಿ ಇರುವ ಕುರಿತು ನಾನು ಯಾವುದೇ ದಾಖಲೆಗಳನ್ನು ನೋಡಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾವು ಸಣ್ಣ ಮಕ್ಕಳು ಇರುವಾಗಿನಿಂದ ನಮ್ಮ ಹಿರಿಯರು ಹೇಳುತ್ತಿದ್ದರು ಎಂದು ನುಡಿಯುತ್ತಾರೆ. ಸರ್ವೆ ನಂ 8 ಮತ್ತು 9 ರಲ್ಲಿನ ಸಾಗುವಳಿದಾರರು ಬಂಡಿದಾರಿಯನ್ನು ಮುಚ್ಚಿ ಸಾಗುವಳಿ ಮಾಡಿರುತ್ತಾರೆ ಎಂದು ಪ್ರ.ಪತ್ರದಲ್ಲಿ ನಾನು ನಮೂದಿಸಿದ್ದು ಸದರಿ ಬಂಡಿದಾರಿಯನ್ನು ಎಷ್ಟು ವರ್ಷಗಳ ಹಿಂದೆ ಮುಚ್ಚಿರುತ್ತಾರೆ ಎಂದರೆ ಸಾಕ್ಷಿ ಸುಮಾರು 25 ವರ್ಷಗಳ ಹಿಂದೆ ಎಂದು ನುಡಿಯುತ್ತಾರೆ. ಸದರಿ 25 ವರ್ಷಗಳಿಂದ 2018 ರವರೆಗೂ ಸದರಿ ಬಂಡಿದಾರಿಯನ್ನು ಮುಚ್ಚಿದ ಕುರಿತು ಯಾರು ತಕರಾರು ಮಾಡಿಲ್ಲ ಎಂದರೆ ಸಾಕ್ಷಿ ಸದರಿ ಜಮೀನು ಬೆದ್ದಲು ಭೂಮಿಯಾಗಿದ್ದರಿಂದ ಹಾಗೇ ಓಡಾಡುತ್ತಿದ್ದೆವು. ಈಗ ಸದರಿ ಜಮೀನನ್ನು ಗದ್ದೆಯಾಗಿ ಪರಿವರ್ತಿಸಿದ ಕಾರಣ ಓಡಾಡಲು ತೊಂದರೆಯಾಗಿದೆ ಎಂದು ನುಡಿಯಾತ್ತಾರೆ.

ನಮ್ಮ ಹಾಗೂ ವಾದಿಯ ಜಮೀನು ತರಿ ಜಮೀನು ಎಂದು ಕಂದಾಯ ದಾಖಲೆಗಳ್ಲಿ ಎಷ್ಟು ವರ್ಷಗಳಿಂದ ನಮೂದು ಇದೆ ಎಂದರೆ ಸಾಕ್ಷಿ 10 ರಿಂದ 15 ವರ್ಷಗಳಿಂದ ಇದೆ ಎಂದು ನುಡಿಯುತ್ತಾರೆ. ಪ್ರಸ್ತುತ ಸ್ದಳದ ಯಥಾಸ್ಥಿತಿಯಂತೆ ಸರ್ವೆ ನಂಬರುಗಳಲ್ಲಿ ಯಾವುದೇ ಬಂಡಿ ದಾರಿ ಇಲ್ಲ ಎಂದರೆ ಸರಿ.

**ಮರು ವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.